ಅರ್ಜಾಲು ತರವಾಡು

# ಅರ್ಜಾಲು ಶ್ರೀ ಧೂಮಾವತಿ ದೈವಸ್ಥಾನ

ಅಡ್ಕತ್ತಬೈಲು, ಕಾಸರಗೋಡು-671121, ಮೊಬೈಲ್ : 9895384813

ಧೂಮಾವತಿ ದೈವದ ಹಾಗೂ

ಅರ್ಜಾಲು ಗೋಳಿತ್ತಡಿ ಒಂದು ಕಡಿಮೆ ನಲ್ವತ್ತು ದೈವದ ಕಟ್ಟೆಯ

## ನವೀಕರಣ ಪುನಃ ಪ್ರತಿಷ್ಠಾ ಬ್ರಹ್ಮಕಲಶೋತ್ಸವ ಹಾಗೂ ಧರ್ಮನೇಮ



**ತಾ. 26-03-2026 ಗುರುವಾರದಿಂದ**

**29-03-2026 ಆದಿತ್ಯವಾರದ ತನಕ**

ಸರ್ವರಿಗೂ ಆದರದ ಸ್ವಾಗತ

॥ ಶ್ರೀ ಮಹಾಗಣಪತಯೇ ನಮಃ ॥ ॥ ಶ್ರೀ ಮಹಾಲಿಂಗೇಶ್ವರ ಪ್ರಸನ್ನಃ ॥

ಶ್ರೀ ಕುಲದೇವತಾ ಪ್ರಸನ್ನಃ ॥

**ಅರ್ಜಾಲು ತರವಾಡು**

# ಅರ್ಜಾಲು ಶ್ರೀ ಧೂಮಾವತಿ ದೈವಸ್ಥಾನ

ಅರ್ಜಾಲು

ತಾ. 07-01-2026

ಆತ್ಮೀಯರೇ,

ಕುಂಬಳೆ ಸೀಮೆಯು ಚಾರಿತ್ರಿಕ ಮಹತ್ವವನ್ನು ಹೊಂದಿದ ಅಡೂರು, ಮಧೂರು, ಕಾವು, ಕಣಿಪುರ ಎಂಬೀ ಕ್ಷೇತ್ರಗಳಿಂದ ಪುನೀತವಾಗಿದೆ. ಸೀಮೆಯ ದೈವಕ್ಷೇತ್ರಗಳಲ್ಲಿ ಕಾಸರಗೋಡು ತಾಲೂಕಿನ ಅಡ್ಕತ್ತಬೈಲು ಗ್ರಾಮದ ಅರ್ಜಾಲು ಶ್ರೀ ಧೂಮಾವತಿ ದೈವಸ್ಥಾನವು ಬಹಳ ಹಿಂದಿನ ಕಾಲದಿಂದಲೇ ಪ್ರಸಿದ್ಧಿಯನ್ನು ಪಡೆದಿದ್ದು, ತನ್ನ ಕಾರಣಿಕ ಶಕ್ತಿಯ ಮೂಲಕ ನಂಬಿದ ಭಕ್ತಾದಿಗಳಿಗೆ ಇಂಬನ್ನು ನೀಡುತ್ತಾ ಬಂದಿದೆ.

ಭವ್ಯವಾದ ವಂಶಪಾರಂಪರ್ಯದ ತಳಹದಿಯನ್ನು ಹೊಂದಿರುವ ಶ್ರೀ ಕ್ಷೇತ್ರವು ಅರ್ಜಾಲು ಮನೆತನದವರ ಕ್ಷೇತ್ರಾಧಿಕಾರದಲ್ಲಿ ಊರಜನರ ಹಾಗೂ ಕುಟುಂಬಿಕರ ನೆರವಿನಿಂದ ಪೂಜಾದಿ ಉತ್ಸವಗಳನ್ನು ನಡೆಸಿ ಬರಲಾಗುತ್ತಿದೆ. ಅಡ್ಕತ್ತಬೈಲು ಗ್ರಾಮದ ಹೃದಯಭಾಗದಲ್ಲಿರುವ ಈ ದೈವಸ್ಥಾನವು ತರವಾಡು ದೈವಕ್ಕೆ ಮಿಗಿಲಾಗಿ ಗ್ರಾಮ ದೈವವಾಗಿ ಮೆರೆಯುತ್ತಿದೆ. ಅರ್ಜಾಲು ಶ್ರೀ ಧೂಮಾವತಿ ದೈವದ ಕೋಲದ ಜೊತೆಗೆ ಅರ್ಜಾಲು ಗೋಳಿತ್ತಡಿಯಲ್ಲಿ ಒಂದು ಕಡಿಮೆ ನಲ್ವತ್ತು ದೈವಗಳ ಕೋಲವು ಕಳೆದ ಹಲವಾರು ವರ್ಷಗಳಿಂದ ತಪ್ಪದೆ ನಡೆಯುತ್ತಿದೆ.

ಅರ್ಜಾಲು ತರವಾಡು ಮನೆ ನಿರ್ಮಾಣದ ವೇಳೆ ನಡೆಸಲಾದ ಅಷ್ಟಮಂಗಲ ಪ್ರಶ್ನೆಯಲ್ಲಿ ಕಂಡುಬಂದಂತೆ ದೈವಸ್ಥಾನವನ್ನು ನವೀಕರಿಸಿ ಹೊಸಪೀಠ, ಕೀರ್ತಿಮುಖ, ದೈವಸ್ಥಾನದ ಸುತ್ತ ರಕ್ಷಣಾಗೋಡೆ, ದೈವಸ್ಥಾನಕ್ಕೆ ತಾಗಿ ಹೊಸಬಾವಿಯ ನಿರ್ಮಾಣ, ಅರ್ಜಾಲು ಗೋಳಿತ್ತಡಿಯಲ್ಲಿ ನೂತನ ಕಟ್ಟೆಯ ನಿರ್ಮಾಣ ಇತ್ಯಾದಿ ಕೆಲಸಗಳು ಪೂರ್ತಿಗೊಂಡಿದೆ.

**ಸ್ವಸ್ತಿ ಶ್ರೀ ಪರಾಭವ ನಾಮ ಸಂವತ್ಸರದ ಮೀನ ಮಾಸ ೧೨,೧೩,೧೪,೧೫ ಸಲುವ ದಿನಾಂಕ 2026ರ ಮಾರ್ಚ್ 26,27,28 ಮತ್ತು 29 ಎಂಬೀ ದಿನಾಂಕಗಳಲ್ಲಿ ಅರ್ಜಾಲು ಶ್ರೀ ಧೂಮಾವತಿ ದೈವಸ್ಥಾನದ ನವೀಕರಣ ಪುನಃಪ್ರತಿಷ್ಠೆ ಹಾಗೂ ಬ್ರಹ್ಮಕಲಶೋತ್ಸವವು ತಂತ್ರಿವರ್ಯರಾದ ಬ್ರಹ್ಮಶ್ರೀ ವಿಷ್ಣುಪ್ರಕಾಶ್ ತಂತ್ರಿ ಕಾವುಮಠ ಇವರ ನೇತೃತ್ವದಲ್ಲಿ ವಿವಿಧ ವೈದಿಕ, ಧಾರ್ಮಿಕ, ಸಾಂಸ್ಕೃತಿಕ ಕಾರ್ಯಕ್ರಮಗಳೊಂದಿಗೆ ಜರಗಲಿರುವುದು. ಆ ಪ್ರಯುಕ್ತ ಈ ಪುಣ್ಯಪ್ರದವಾದ ಭಗವತ್ಸೇವೆಗಳಲ್ಲಿ ತಾವೆಲ್ಲರೂ ಭಾಗವಹಿಸಿ ಸರ್ವ ರೀತಿಯ ಸಹಾಯ ಸಹಕಾರಗಳನ್ನಿತ್ತು ಶ್ರೀದೈವದ ಕೃಪೆಗೆ ಪಾತ್ರರಾಗಬೇಕಾಗಿ ಪ್ರೀತಿಪೂರ್ವಕ ಅಪೇಕ್ಷಿಸುತ್ತೇವೆ.**

ಇತೀ,

ಶ್ರೀ ಸಂಜೀವ ರೈ ಅರ್ಜಾಲು
ಕುಟುಂಬದ ಯಜಮಾನ

ಶ್ರೀ ಸುಬ್ಬಣ್ಣ ರೈ ಪುತ್ರಕಳ
ಅಧ್ಯಕ್ಷರು
ಅರ್ಜಾಲು ಶ್ರೀ ಧೂಮಾವತಿ ಸೇವಾ ಟ್ರಸ್ಟ್(ರಿ)
ಹಾಗೂ ಸರ್ವ ಸದಸ್ಯರು

ಅಧ್ಯಕ್ಷರು ಹಾಗೂ ಸರ್ವ ಸದಸ್ಯರು
ಬ್ರಹ್ಮಕಲಶೋತ್ಸವ ಸಮಿತಿ, ಅರ್ಜಾಲು ಶ್ರೀ ಧೂಮಾವತಿ ದೈವಸ್ಥಾನ

## -: ಕಾರ್ಯಕ್ರಮಗಳು :-

### 26-03-2026 ಗುರುವಾರ

| | |
|---|---|
| ಮಧ್ಯಾಹ್ನ 3:00ಕ್ಕೆ | : ಹಸಿರುವಾಣಿ ಹೊರೆಕಾಣಿಕೆ ಮೆರವಣಿಗೆ, (ಗುಡ್ಡೆ ಶ್ರೀಮಹಾಲಿಂಗೇಶ್ವರ ಕ್ಷೇತ್ರದಿಂದ ಶ್ರೀ ಸನ್ನಿಧಿಗೆ) ನಂತರ ಉಗ್ರಾಣ ತುಂಬಿಸುವುದು |
| 4:00ರಿಂದ | : ಭಜನೆ, ಬೀರಂತಬೈಲ್ ಮಹಿಳಾ ಭಜನಾ ಸಂಘ, ಕಾಸರಗೋಡು |
| 5:00ಕ್ಕೆ | : ಬ್ರಹ್ಮಶ್ರೀ ವಿಷ್ಣುಪ್ರಕಾಶ್ ತಂತ್ರಿ ಕಾವುಮಠ ಇವರಿಗೆ ಪೂರ್ಣಕುಂಭ ಸ್ವಾಗತ ಹಾಗೂ ವೈದಿಕರ ಆಗಮನ |
| 6:00ರಿಂದ | : ಆಚಾರ್ಯವರಣ, ಸಮೂಹ ದೇವತಾಪ್ರಾರ್ಥನೆ, ಪ್ರಾಸಾದ ಶುದ್ಧಿ, ಪುಣ್ಯಾಹವಾಚನ, ವಾಸ್ತುಹೋಮ, ರಾಕ್ಷೋಘ್ನ ಹೋಮ, ಜೀವೋದ್ವಾಸನೆ, ವಾಸ್ತು ಬಲಿ, ವಾಸ್ತುಪುಣ್ಯಾಹಂತ |
| 8:00ರಿಂದ | : ಭಜನೆ, ಆನಂದ ಲಹರಿ ಅನಂತಪುರ ಇವರಿಂದ |
| 8:30ರಿಂದ | : ಅನ್ನದಾನ |

### 27-03-2026 ಶುಕ್ರವಾರ

| | |
|---|---|
| ಪ್ರಾತಃ 6ಗಂಟೆಗೆ | : ಮಹಾಗಣಪತಿಹೋಮ, ಬ್ರಹ್ಮಕಲಶಪೂಜೆ, ಬೆಳಿಗ್ಗೆ 9.24ರಿಂದ 10.47ರ ತನಕ ಒದಗುವ ಮೇಷ ಲಗ್ನ ಶುಭ ಮುಹೂರ್ತದಲ್ಲಿ ಶ್ರೀ ಧೂಮಾವತಿ ದೈವದ ಪ್ರತಿಷ್ಠೆ ಹಾಗೂ ಅರ್ಜಾಲು ಗೋಳಿತ್ತಡಿಯಲ್ಲಿ ಒಂದು ಕಡಿಮೆ ನಲ್ವತ್ತು ದೈವದ ಕಟ್ಟೆಯ ಪ್ರತಿಷ್ಠೆ, ಮಹಾಪೂಜೆ, ಸಾಮೂಹಿಕ ಪ್ರಾರ್ಥನೆ, ನಿತ್ಯನೈಮಿತ್ತಿಕ ನಿರ್ಣಯ, ಪ್ರಸಾದ ವಿತರಣೆ. |
| ಮಧ್ಯಾಹ್ನ 12:30ರಿಂದ | : ಅನ್ನದಾನ |
| ಮಧ್ಯಾಹ್ನ 1:30ರಿಂದ | : ಯಕ್ಷಗಾನ ಕೂಟ, ಶ್ರೀ ಗೋಪಾಲಕೃಷ್ಣ ಅಡಿಗ ಪ್ರಧಾನ ಅರ್ಚಕರ ನೇತೃತ್ವದಲ್ಲಿ ನುರಿತ ಕಲಾವಿದರಿಂದ |
| ಸಂಜೆ 4ಗಂಟೆಗೆ | : ಶ್ರೀಮದ್ ಜಗದ್ಗುರು ಶಂಕರಾಚಾರ್ಯ ಸಂಸ್ಥಾನ ಶ್ರೀಮದೆಡನೀರು ಮಠಾಧೀಶರಾದ ಪರಮಪೂಜ್ಯ ಶ್ರೀ ಶ್ರೀ ಶ್ರೀ ಸಚ್ಚಿದಾನಂದ ಭಾರತೀ ಶ್ರೀಪಾದಂಗಳವರ ಆಗಮನ, ಪೂರ್ಣಕುಂಭ ಸ್ವಾಗತ |

### ಧಾರ್ಮಿಕ ಮತ್ತು ಸಾಂಸ್ಕೃತಿಕ ಕಾರ್ಯಕ್ರಮಗಳ ಉದ್ಘಾಟನೆ

| | |
|---|---|
| ಸ್ವಾಗತ | : ಶ್ರೀ ಸಂತೋಷ್‌ಕುಮಾರ್ ರೈ ಗಾಡಿಗುಡ್ಡೆ ಕಾರ್ಯದರ್ಶಿ ಬ್ರಹ್ಮಕಲಶೋತ್ಸವ ಸಮಿತಿ |
| ದೀಪಪ್ರಜ್ವಲನೆ ಮತ್ತು ಆಶೀರ್ವಚನ | : ಪರಮಪೂಜ್ಯ ಶ್ರೀಶ್ರೀಶ್ರೀ ಸಚ್ಚಿದಾನಂದ ಭಾರತೀ ಶ್ರೀಪಾದಂಗಳವರು ಎಡನೀರು ಮಠ |
| ಅಧ್ಯಕ್ಷತೆ | : ಶ್ರೀ ದೇರಣ್ಣ ರೈ ಪುತ್ರಕಳ, ಅಧ್ಯಕ್ಷರು ಬ್ರಹ್ಮಕಲಶೋತ್ಸವ ಸಮಿತಿ |
| ಮುಖ್ಯ ಅತಿಥಿ | : ಶ್ರೀ ಎಂ. ಸಂಜೀವ ಶೆಟ್ಟಿ ಮೊಟ್ಟಕುಂಜ, ಧಾರ್ಮಿಕ-ಸಾಮಾಜಿಕ ಮುಂದಾಳು |
| | : ಎಡ್ವ. ಬಿ ಸುಬ್ಬಯ್ಯ ರೈ, ಅಧ್ಯಕ್ಷರು, ಕಾಸರಗೋಡು ಜಿಲ್ಲಾ ಬಂಟರ ಸಂಘ |
| ಶುಭಾಶಂಸನೆ | : ಶ್ರೀ ಗೋಪಾಲಕೃಷ್ಣ ಅಡಿಗ, ಪ್ರಧಾನ ಅರ್ಚಕರು, ಅರ್ಜಾಲು ತರವಾಡು |
| | : ಶ್ರೀ ರಮೇಶ್ ಕಾರಂತ ಬೆದ್ರಡ್ಕ, ವಾಸ್ತು ಶಿಲ್ಪಿ |
| ಧಾರ್ಮಿಕಭಾಷಣ | : ಶ್ರೀಮತಿ ಅರ್ಪಿತಾ ಪ್ರಶಾಂತ್ ಶೆಟ್ಟಿ ಕಟಪಾಡಿ ಸಹಾಯಕ ಪ್ರಾಧ್ಯಾಪಕರು ಉಡುಪಿ ಸಮೂಹ ಶಿಕ್ಷಣ ಸಂಸ್ಥೆಗಳು ಮಣಿಪಾಲ |



| | |
|---|---|
| ಗೌರವ ಉಪಸ್ಥಿತಿ | : ಶ್ರೀ ಸುಧಾಕರ ಕೋಟಿಕುಂಜತ್ತಾಯ, ಮೊಕ್ತೇಸರರು,ಗುಡ್ಡೆ ಶ್ರೀ ಮಹಾಲಿಂಗೇಶ್ವರ ದೇವಸ್ಥಾನ |
| | : ಶ್ರೀ ಭಾಸ್ಕರ ಸುವರ್ಣ,ಯಜಮಾನ ಬೈದರ್ಕಳ ಗರೋಡಿ ಹೊಸಮನೆ, ಅಡ್ಕತ್ತಬೈಲ್ |
| | : ಶ್ರೀ ಗಣೇಶ ಆಳ್ವ ಹೊಸಹಿತ್ತಿಲು |
| | : ಶ್ರೀ ದೂಮಣ್ಣ ರೈ ಕೋಟತಡಿ ಕುದ್ರು ತರವಾಡು ಮನೆ, ಅಡ್ಕತ್ತಬೈಲ್ |
| | : ಶ್ರೀ ವಸಂತ ನಾಯಕ್ ಗೋಳಿತ್ತಡಿ |
| | : ಶ್ರೀ ಸುರೇಶ್ ಕೆ ಕಾರ್ಯದರ್ಶಿ, ಬಬ್ಬರ್ಯಕಟ್ಟೆ ಕುದ್ರು |
| ಧನ್ಯವಾದ | : ಶೇಖರ ರೈ ಕೆ ಜೊತೆಕಾರ್ಯದರ್ಶಿ, ಬ್ರಹ್ಮಕಲಶೋತ್ಸವ ಸಮಿತಿ |

### ಸಾಂಸ್ಕೃತಿಕ ಕಾರ್ಯಕ್ರಮ

| | |
|---|---|
| ರಾತ್ರಿ 7ರಿಂದ | : 'ಗೀತಾಸಾಹಿತ್ಯಸಂಭ್ರಮ' ಶ್ರೀ ವಿಠಲ ನಾಯಕ್ ಕಲ್ಲಡ್ಕ ಬಳಗದವರಿಂದ |
| ರಾತ್ರಿ 8ಕ್ಕೆ | : ಅನ್ನದಾನ |
| 9.00ರಿಂದ | : ಸ್ಥಳೀಯ ಮಕ್ಕಳಿಂದ ನೃತ್ಯ ವೈವಿಧ್ಯ |

### 28-03-2026 ಶನಿವಾರ

| | |
|---|---|
| ಪ್ರಾತಃಕಾಲ 8ಗಂಟೆಗೆ | : ಗಣಪತಿಹೋಮ, ಮುಡಿಪು ಪೂಜೆ |
| 12ಗಂಟೆಗೆ | : ಪ್ರಸಾದ ವಿತರಣೆ |
| ಮಧ್ಯಾಹ್ನ 1ಗಂಟೆಗೆ | : ಅನ್ನದಾನ |
| ಮಧ್ಯಾಹ್ನ 1:30ರಿಂದ | : ಹರಿಕಥಾ ಸತ್ಸಂಗ 'ಗಜಗೌರಿ ವ್ರತ' ಶ್ರೀ ಸುಧಾಕರ ಕೋಟಿಕುಂಜತಾಯರು ಗುಡ್ಡೆ ದೇವಸ್ಥಾನ ಅವರಿಂದ |
| 3:30ರಿಂದ 4:30ರ ತನಕ | : ಭಜನೆ, ಶ್ರೀಸತ್ಯನಾರಾಯಣ ಮಹಿಳಾ ಭಜನಾ ಮಂಡಳಿ ಕುಬಣೂರು ಇವರಿಂದ |
| 5ರಿಂದ 6ರ ತನಕ | : ಭಜನೆ, ಶ್ರೀ ಸುಬ್ರಹ್ಮಣ್ಯ ಭಜನಾ ಸಂಘ ಅಡ್ಕತ್ತಬೈಲು ಇವರಿಂದ |
| 6.30ರಿಂದ | : ಕುಣಿತ ಭಜನೆ, ಧರ್ಮಶಿಕ್ಷಣ ಪಾಠಶಾಲೆ ಗುಡ್ಡೆ ಮಹಾಲಿಂಗೇಶ್ವರ ಕ್ಷೇತ್ರ ಇವರಿಂದ |
| 7ರಿಂದ | : ಶ್ರೀ ದೈವಗಳ ಭಂಡಾರ ಇಳಿಯುವುದು |
| ರಾತ್ರಿ 8ಗಂಟೆಗೆ | : ಶ್ರೀ ಗುಳಿಗನಕೋಲ ಮತ್ತು ಉಪದೈವಗಳ ಕೋಲ |
| ರಾತ್ರಿ 9ಗಂಟೆಗೆ | : ಅನ್ನದಾನ |

### 29-03-2026 ಆದಿತ್ಯವಾರ

| | |
|---|---|
| ಪ್ರಾತಃಕಾಲ 8ಗಂಟೆಗೆ | : ಅರ್ಜಾಲು ಶ್ರೀ ಧೂಮಾವತಿ ಧರ್ಮದೈವದ ನೇಮ ಹಾಗೂ ಉಪದೈವಗಳ ಕೋಲ |
| 12ಗಂಟೆಗೆ | : ಪ್ರಸಾದ ವಿತರಣೆ |
| 12.30ಗಂಟೆಗೆ | : ಅನ್ನದಾನ |
| ರಾತ್ರಿ ಗಂಟೆಗೆ 7ಕ್ಕೆ | : ಅರ್ಜಾಲು ಗೋಳಿತ್ತಡಿಯಲ್ಲಿ ಒಂದು ಕಡಿಮೆ ನಲ್ವತ್ತು ದೈವಗಳ ಕೋಲ, ಪ್ರಸಾದ ವಿತರಣೆ |
| 9ಗಂಟೆಗೆ | : ಅನ್ನದಾನ |

## ಕಲಶ ಸೇವೆ ರೂ. 501.00

ವಿ. ಸೂ:

1. ದೇಣಿಗೆಗಳನ್ನು ಕೊಡುವವರು ನೇರವಾಗಿ ಸೇವಾ ಟ್ರಸ್ಟ್‌ನ ಕೌಂಟರಿನಲ್ಲಿ ಕೊಟ್ಟು ರಶೀದಿಯನ್ನು ಪಡೆದುಕೊಳ್ಳಬೇಕಾಗಿ ಅಪೇಕ್ಷೆ.
2. ಶ್ರೀ ಧೂಮಾವತಿ ದೈವಕ್ಕೆ ಬೆಳ್ಳಿಯ ಹೂ, ಬೆಳ್ಳಿಯ ತೊಟ್ಟಿಲು, ಮಗು ಇತ್ಯಾದಿ ಹರಕೆ ಹೊತ್ತವರು ಇವುಗಳನ್ನು ಕ್ಷೇತ್ರದಿಂದಲೇ ಪಡೆಯಬೇಕಾಗಿ ವಿನಂತಿ.
3. ಶ್ರೀ ದೈವಸ್ಥಾನದಲ್ಲಿ ತುಲಾಭಾರ ಮಾಡಲಿಚ್ಚಿಸುವವರು ಮೂರು ದಿನಗಳ ಮುಂಚಿತವಾಗಿ ಅವರ ಹೆಸರು ನೋಂದಾಯಿಸಬೇಕಾಗಿ ವಿನಂತಿ.
4. ಈ ಸಂದರ್ಭದಲ್ಲಿ ವಿಶೇಷ ತಂಬಿಲ ಸೇವೆಯು ನಡೆಯಲಿರುವುದು. ತಂಬಿಲ ಒಂದಕ್ಕೆ ರೂ. 150/-ನ್ನು ತೆತ್ತು ರಶೀದಿಯನ್ನು ಪಡೆದು ಪ್ರಸಾದವನ್ನು ಪಡೆದುಕೊಳ್ಳಬೇಕಾಗಿ ವಿನಂತಿ.
5. ಅರ್ಜಾಲು ಮನೆತನಕ್ಕೆ ಸಂಬಂಧಪಟ್ಟವರು ರೂ. 2000/- ಶ್ರೀ ದೈವಸ್ಥಾನಕ್ಕೆ ತಂದೊಪ್ಪಿಸಿ ರಶೀದಿಯನ್ನು ಪಡೆದು ಪ್ರಸಾದವನ್ನು ಪಡೆದುಕೊಳ್ಳಬೇಕಾಗಿ ವಿನಂತಿ.

ದಾರಿಗಾಗಿ ಸ್ಕ್ಯಾನ್ ಮಾಡಿ

## ಅರ್ಜಾಲು ತರವಾಡು

